# ಅಮೃತ ಬಳ್ಳಿಯಲ್ಲ!



■ ಚಿತ್ರ–ಬರಹ:
**ಕೆರೆಮನೆ ಭರತ್‌ರಾಜ್**

ಇದು ನೋಡಲು ಅಮೃತ ಬಳ್ಳಿಯಂತೆ ಕಂಡರೂ, ಅಮೃತ ಬಳ್ಳಿಯಲ್ಲ. **Aristolochiaecae** ಎಂಬ ಕುಟುಂಬಕ್ಕೆ ಸೇರಿದ ಈ ಬಳ್ಳಿ ನೋಡಲು ಆಕರ್ಷಕವಲ್ಲದಿದ್ದರೂ, ಇದರ ಹೂವು ಮಾತ್ರ ಬೆರಗುಗೊಳಿಸುವಂತಿದೆ. ಈ ಸಸ್ಯಕುಟುಂಬದಲ್ಲೇ ಸುಮಾರು 200 ಪ್ರಭೇದಗಳಿವೆಯಂತೆ. ಭಾರತದಲ್ಲಿ ಪ್ರಮುಖವಾಗಿ 7 ಪ್ರಭೇದಗಳು ಕಾಣಸಿಗುತ್ತವೆ. ಪಶ್ಚಿಮ ಘಟ್ಟಗಳಲ್ಲಿ ಈ ಜಾತಿಗೆ ಸೇರಿದ ಬಳ್ಳಿಗಳಿದ್ದು, ಇದನ್ನು ‘ಬಾತುಕೋಳಿ ಹೂ’ ಎಂದೂ ಕರೆಯುತ್ತಾರೆ.

ಇತರ ಪ್ರಾಣಿ, ಪಕ್ಷಿಗಳಿಂದ ಮೊಟ್ಟೆಯನ್ನು ರಕ್ಷಿಸಿಕೊಳ್ಳಲು **swallototail** ಎಂಬ ಚಿಟ್ಟೆ ಪ್ರಭೇದವು ಇದರ ಮೊಗ್ಗಿನಲ್ಲೇ ಮೊಟ್ಟೆ ಇಡುತ್ತದೆ. ಅದಕ್ಕಿದು ಸುರಕ್ಷಿತ ಸ್ಥಳ! ಹೂವು ಅರಳಿದಾಗ ತುಂಬ ವಿಚಿತ್ರವಾಗಿ ಕಾಣಿಸುತ್ತದೆ. ಹೂವು ಅರಳಿ 3–4 ದಿನ ಮಾತ್ರ ಇರುತ್ತದೆ. ಮಳೆಗಾಲದಲ್ಲಿ ಹೂವು ಬಿಡುವುದು ಕಡಿಮೆ. ಬೇಸಿಗೆಯಲ್ಲಿ ಸಾಕಷ್ಟು ನೀರು ಒದಗಿಸಿದರೆ ಯಾವಾಗಲೂ ಹೂವು ಅರಳುತ್ತದೆ. ಬಳ್ಳಿ ಬೆಳೆಯಲು ನೆರಳಿನ ಅವಶ್ಯಕತೆ ಇದೆ. ಏಣಿಯ ಕಾಲಿನ ತರಹ ಬಳ್ಳಿಯ ಎಲೆಗಳು ಆಕಡೆ ಈಕಡೆ ಚಾಚಿರುತ್ತವೆ. ಹೂವು ಅರಳಿದ ನಂತರ ತಲೆಕೆಳಗಾದ ಕೊಡೆಯ ತರಹ ಕಾಯಿಯಾಗಿ ಅದರಲ್ಲಿ ಬೀಜಗಳು ಇರುತ್ತವೆ. ಈ ಬೀಜಗಳಿಂದ ಗಿಡವನ್ನು ಅಭಿವೃದ್ಧಿ ಪಡಿಸಬಹುದು. ಇದನ್ನು ವಿಚಿತ್ರ ಹೂವು ಎಂದೂ ಕರೆಯುವುದಿದೆ. ●



---

# ಕಪ್ಪು ಕೋಳಿ!

■ **ವಿನಯ್‌ಕುಮಾರ್ ಬಿ.ಎಚ್.**





ಇಂಡೋನೇಷ್ಯಾದ ‘ಯಾಮ್ ಸೆಮನಿ’ ಎನ್ನುವ ಕೋಳಿಯ ಒಳ ಮತ್ತು ಹೊರ ಸೇರಿದಂತೆ ಇಡೀ ದೇಹವೆಲ್ಲಾ ಕಪ್ಪು! ಇದರ ಚರ್ಮ, ನಾಲಿಗೆ, ಕೊಕ್ಕು, ತುಪ್ಪಳ, ಕಾಲುಗಳು, ಕಾಲಿನ ಉಗುರು, ಮಾಂಸ, ಮೂಳೆ, ಅಂಗಾಗಗಳೆಲ್ಲ ಕಪ್ಪು. ಎಲುಬಿನ ನೆಣ ಕೂಡಾ ಕಪ್ಪುಮಯ. ಇದರ ರಕ್ತ ಕಪ್ಪು ಬಣ್ಣದ್ದಲ್ಲವಾದರೂ ಗಾಢ ಬಣ್ಣವನ್ನು ಹೊಂದಿದೆ. ಅದಕ್ಕೇ ಯಾಮ್ ಸೆಮಿನಿ–ಯನ್ನು ‘ಲ್ಯಾಂಬರ್ಗಿನಿ ಆಫ್ ಪೌಲ್ಟ್ರಿ’ ಎಂದು ಕರೆಯುತ್ತಾರೆ.

ಇಂಡೋನೇಷ್ಯಾದ ಭಾಷೆಯಲ್ಲಿ ‘ಯಾಮ್’ ಎಂದರೆ ಕೋಳಿ. ಜಾವಾದ ಭಾಷೆಯಲ್ಲಿ ‘ಸೆಮನಿ’ ಎಂದರೆ ಸಂಪೂರ್ಣ ಕಪ್ಪು ಎಂದರ್ಥ. ಇಂಡೋನೇಷ್ಯಾದ ಜಾವಾ ಪ್ರದೇಶವೇ ಈ ಕಪ್ಪು ಕೋಳಿ ತಳಿಯ ಮೂಲ. 1998ರಲ್ಲಿ ಡಚ್ಚರು ಈ ಕೋಳಿಗಳನ್ನು ಯೂರೋಪ್‌ಗೆ ಪರಿಚಯಿಸಿದರು. ಇದರ ಕಡುಗಪ್ಪು ಬಣ್ಣದಿಂದ ಆಕರ್ಷಿತರಾದ ಮಂದಿ ಈ ಕೋಳಿಗಳನ್ನು ಸಾಕಲು ಮುಂದಾಗಿದ್ದಾರೆ. ಪ್ರಪಂಚದಲ್ಲೇ ದುಬಾರಿ ಕೋಳಿಗಳಲ್ಲಿ ಯಾಮ್ ಸೆಮನಿಯೂ ಒಂದು. ಈ ಕೋಳಿ ಬೆಲೆ 2500 ಡಾಲರ್; ಅಂದರೆ ಸುಮಾರು ಒಂದೂವರೆ ಲಕ್ಷ ರೂಪಾಯಿಗೂ ಹೆಚ್ಚು!

ಫೈಬ್ರೊಮೆಲನೋಸಿಸ್ ಎಂಬ ವಿಶೇಷ ಗುಣವೇ ಯಾಮ್ ಸೆಮನಿಯ ವರ್ಣ ವೈಶಿಷ್ಟ್ಯಕ್ಕೆ ಕಾರಣ. ಇದು ಕಪ್ಪು ವರ್ಣದ್ರವ್ಯ ಉತ್ಪಾದನೆಗೆ ಉತ್ತೇಜನ ನೀಡುತ್ತದೆ. ಇದು ಆಧ್ಯಾತ್ಮಿಕ ರೂಪಾರ್ಥವುಳ್ಳ ಶಕ್ತಿ ಹೊಂದಿದೆ ಎಂದು ಬಲವಾಗಿ ನಂಬಿರುವುದರಿಂದ ಏಷ್ಯಾದಲ್ಲಿ ಇದರ ಮಾಂಸಕ್ಕೆ ಬಲು ಬೇಡಿಕೆಯಂತೆ. ಈ ಕೋಳಿ ಮಾಂಸದಲ್ಲಿ ಕಬ್ಬಿಣದ ಅಂಶ ಅಧಿಕ–ವಾಗಿರುವುದರಿಂದ ಗರ್ಭಿಣಿಯರಿಗೂ, ಬಾಣಂತಿಯರಿಗೂ ಬಲು ಉಪಯುಕ್ತ.

ಕೆಲವೆಡೆ ಪ್ರಸವ ಸಮಯದಲ್ಲಿ ಇದು ಅದೃಷ್ಟ–ವನ್ನು ಉಂಟು ಮಾಡುತ್ತದೆ ಎಂಬ ಕಾರಣಕ್ಕಾಗಿ ಈ ಕೋಳಿಯನ್ನು ಬಲಿ ಕೊಡುತ್ತಾರಂತೆ. ಕೆಲವೆಡೆ ಉತ್ಸವಗಳಲ್ಲೂ ಬಲಿ ಕೊಡಲು ಈ ಕಪ್ಪುಕೋಳಿಗೆ ಬೇಡಿಕೆ ಇದೆ. ಈ ಕೋಳಿ ಕೂಗಿದರೆ ಸಂಪತ್ತು ಹೆಚ್ಚುತ್ತದೆನ್ನುವ ಮೂಢನಂಬಿಕೆ ಕೆಲವೆಡೆ ಇದೆ.

ಇದರ ದೇಹ ಕಪ್ಪಗಿದ್ದರೂ ಮೊಟ್ಟೆಗಳು ಮಾತ್ರ ಕೆನೆ ಹಾಲಿನ ಬಣ್ಣದ್ದು! ●